# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ,

ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ- 04, ಭೂತರಾಮನಹಟ್ಟಿ, ಬೆಳಗಾವಿ - 591156

# RANI CHANNAMMA UNIVERSITY

Vidyasangama, National Highway - 04, BhootaramanahattiBelagavi - 591156

E-mail: rcuregistrar@gmail.com
rcubacademic2010@gmail.com

ವಿದ್ಯಾಮಂಡಳ (ಸ್ನಾತಕೋತ್ತರ ವಿಭಾಗ)

Phone: 0831-2565257/34
Website: www.rcub.ac.in


ಸಂ.:ರಾಚವಿ/ಬೆಳಗಾವಿ/ಕುಸಕಾ/ವಿ.ಮ.ವಿ.ಸ್ನಾತಕೋತ್ತರ/2021-22/ 1666 ದಿನಾಂಕ: 14 AUG 2021

## ಸುತ್ತೋಲೆ

**ವಿಷಯ: 2020-21ನೇ ಸಾಲಿನ ಸ್ನಾತಕೋತ್ತರ 2 ಮತ್ತು 4ನೇ ಸೆಮಿಸ್ಟರ್‌ಗಳ ಅಧ್ಯಯನ ಮುಂದುವರೆಸಿರುವ ಶುಲ್ಕವನ್ನು ಭರಿಸಿಕೊಳ್ಳುವ ಕುರಿತು.**

ಉಲ್ಲೇಖ: 1. ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಇಡಿ 197 ಯುಎನ್‌ಇ 2020 ಬೆಂಗಳೂರು ದಿನಾಂಕ:23-07-2021.
2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:14-08-2021.

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಗಳನ್ವಯ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಎಲ್ಲ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಮುಖ್ಯಸ್ಥರುಗಳಿಗೆ, ಸ್ನಾತಕೋತ್ತರ ಕೇಂದ್ರಗಳ ನಿರ್ದೇಶಕರು/ಸಂಯೋಜಕರಿಗೆ ಮತ್ತು ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯದ ಪ್ರಾಚಾರ್ಯರಿಗೆ ಹಾಗೂ ವಿಶ್ವವಿದ್ಯಾಲಯದ ಸಂಯೋಜಿತ ಸ್ನಾತಕೋತ್ತರ ಮಹಾವಿದ್ಯಾಲಯಗಳ ಪ್ರಾಂಶುಪಾಲರುಗಳಿಗೆ ಈ ಮೂಲಕ ತಿಳಿಸುವುದೇನೆಂದರೆ, 2020-21ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ 2 ಮತ್ತು 4ನೇ ಸೆಮಿಸ್ಟರ್‌ಗಳ ವಿದ್ಯಾರ್ಥಿಗಳ ಅಧ್ಯಯನ ಮುಂದುವರೆಸುವ ಪ್ರಕ್ರಿಯೆಯನ್ನು ಈ ಕೆಳಗಿನ ದಿನಾಂಕಗಳ ಪ್ರಕಾರ ಪ್ರಾರಂಭಿಸಲು ಸೂಚಿಸಲಾಗಿದೆ.

| ಅಧ್ಯಯನ ಮುಂದುವರೆಸಲು ಅರ್ಜಿ ನಮೂನೆಯನ್ನು ಭರ್ತಿ ಮಾಡುವ ಅವಧಿ | ಅರ್ಜಿ ಶುಲ್ಕ | ದಂಡ ಶುಲ್ಕ ರೂ.1000/-ದೊಂದಿಗೆ ಅರ್ಜಿ ನಮೂನೆ ಭರ್ತಿ ಮಾಡುವ ಅವಧಿ |
|---|---|---|
| ದಿನಾಂಕ:14-08-2021 ರಿಂದ 26-08-2021ರ ವರೆಗೆ | ಸಾಮಾನ್ಯ/ಓ.ಬಿ.ಸಿ- ರೂ.500/-<br>ಎಸ್.ಸಿ/ಎಸ್.ಟಿ/ಪ್ರ-1- ರೂ.250/- | ದಿನಾಂಕ: 27-08-2021 ರಿಂದ 30-08-2021ರ ವರೆಗೆ |

**ಸೂಚನೆ:** 2020-21ನೇ ಸಾಲಿನ ಸ್ನಾತಕೋತ್ತರ ಪದವಿಯ 1 ಮತ್ತು 3ನೇ ಸೆಮಿಸ್ಟರ್‌ನಲ್ಲಿ ಶೇ.75ರಷ್ಟು ತರಗತಿಗಳ ಹಾಜರಾತಿಯನ್ನು ಹೊಂದಿರುವ ವಿದ್ಯಾರ್ಥಿಗಳಿಗೆ ಮಾತ್ರ ಅಧ್ಯಯನ ಮುಂದುವರೆಸಲು ಅರ್ಹತೆ ಇರುತ್ತದೆ ಮತ್ತು ಅಧ್ಯಯನ ಮುಂದುವರೆಸಿದ ನಂತರ ಶೇ.75 ರಷ್ಟು ಹಾಜರಾತಿಯನ್ನು ಪೂರೈಸಿದಲ್ಲಿ ಮಾತ್ರ ಪರೀಕ್ಷೆಗೆ ಕುಳಿತುಕೊಳ್ಳಲು ಅವಕಾಶವಿರುತ್ತದೆ. ಕನಿಷ್ಠ ಹಾಜರಾತಿಯುಳ್ಳ ವಿದ್ಯಾರ್ಥಿಗಳಿಗೆ ಪರೀಕ್ಷೆಗೆ ಕುಳಿತುಕೊಳ್ಳಲು ಅವಕಾಶವಿರುವುದಿಲ್ಲ.

ಮುಂದುವರೆದು, ಸದರಿ ಅರ್ಜಿ ನಮೂನೆಯನ್ನು ವಿಶ್ವವಿದ್ಯಾಲಯ ವೆಬ್‌ಸೈಟ್‌ನಲ್ಲಿ (www.rcub.ac.in) ಲಭ್ಯವಿದ್ದು, ವಿದ್ಯಾರ್ಥಿಗಳು ಇಲ್ಲಿಂದ ಪಡೆದುಕೊಂಡು ಅರ್ಜಿ ಶುಲ್ಕವನ್ನು ವಿಭಾಗವಾರು ಪ್ರತ್ಯೇಕವಾಗಿ ಚಲನ್ ಅಥವಾ ಡಿಡಿ ಮುಖಾಂತರ ಹಣಕಾಸು ಅಧಿಕಾರಿಗಳು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ ಇವರ ಹೆಸರಿನಲ್ಲಿ ಪಾವತಿಸಿ, ಹಣಕಾಸು ವಿಭಾಗದಿಂದ ರಶೀದಿ ಪಡೆದುಕೊಂಡು ಅರ್ಜಿಯೊಂದಿಗೆ ಲಗತ್ತಿಸುವುದು ಹಾಗೂ ಎಲ್ಲ ಸ್ನಾತಕೋತ್ತರ ಅಧ್ಯಯನ ವಿಭಾಗಗಳು ಮುಖ್ಯಸ್ಥರುಗಳಿಗೆ, ಸ್ನಾತಕೋತ್ತರ ಕೇಂದ್ರಗಳ ನಿರ್ದೇಶಕರು/ಸಂಯೋಜಕರಿಗೆ ಮತ್ತು ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯದ ಪ್ರಾಚಾರ್ಯರಿಗೆ ಹಾಗೂ ವಿಶ್ವವಿದ್ಯಾಲಯದ ಸಂಯೋಜಿತ ಸ್ನಾತಕೋತ್ತರ ಮಹಾವಿದ್ಯಾಲಯಗಳ ಪ್ರಾಂಶುಪಾಲರುಗಳಿಗೆ, ಅಧ್ಯಯನ ಮುಂದುವರೆಸಿದ ವಿದ್ಯಾರ್ಥಿಗಳ ಪ್ರತ್ಯೇಕ ಕೋರ್ಸವಾರು ಯಾದಿಯನ್ನು ಸಿದ್ಧಪಡಿಸಿ ದಿನಾಂಕ:03-09-2021 ರೊಳಗೆ ವಿದ್ಯಾಮಂಡಳ ವಿಭಾಗಕ್ಕೆ ಕಳುಸಿಕೊಡಲು ಕೋರಲಾಗಿದೆ.

ಕುಲಸಚಿವರು

ಕುಲಸಚಿವರು
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ
ವಿದ್ಯಾ ಸಂಗಮ
ಬೆಳಗಾವಿ-591156, ಕರ್ನಾಟಕ

**ಲಗತ್ತು;** 2020-21ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ 2 ಮತ್ತು 4ನೇ ಸೆಮಿಸ್ಟರ್ ಮುಂದುವರಸುವ ಅರ್ಜಿ ನಮೂನೆ.

**ಇವರಿಗೆ,**

1. ಎಲ್ಲಾ ಸ್ನಾತಕೋತ್ತರ ವಿಭಾಗಗಳ ಮುಖ್ಯಸ್ಥರುಗಳಿಗೆ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.
2. ನಿರ್ದೇಶಕರು/ಸಂಯೋಜಕರು, ಸ್ನಾತಕೋತ್ತರ ಕೇಂದ್ರಗಳು ವಿಜಯಪುರ ಮತ್ತು ಬಾಗಲಕೋಟೆ, ಜಮಖಂಡಿ.
3. ಪ್ರಾಚಾರ್ಯರು, ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ, ಬೆಳಗಾವಿ.
4. ಪ್ರಾಚಾರ್ಯರು, ಎಲ್ಲ ಸಂಯೋಜಿತ ಮಹಾವಿದ್ಯಾಲಯಗಳು, ಬೆಳಗಾವಿ, ವಿಜಯಪುರ ಮತ್ತು ಬಾಗಲಕೋಟೆ, ಜಮಖಂಡಿ.

**ಪ್ರತಿ ಮಾಹಿತಿಗಾಗಿ;**

1. ಕುಲಸಚಿವರು(ಮೌಲ್ಯಮಾಪನ) ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.
2. ಹಣಕಾಸು ಅಧಿಕಾರಿಗಳು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.
3. ಮಾನ್ಯ ಕುಲಪತಿಗಳ ಆಪ್ತಕಾರ್ಯದರ್ಶಿಗಳು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.
4. ರಕ್ಷಾ ಪ್ರತಿ.